(ಇಂದು ದಿನಾಂಕ 08-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - 1 ನೇ ಪ್ರತಿವಾದಿ ಪರ ಶ್ರೀ ಕೆ.ಬಿ. ಎನ್. ವಕೀಲರಿಂದ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ನಮೂದಿಸಿರುವ ಮಜಕೂರುಗಳು ಸತ್ಯವಾಗಿದ್ದು, ಅದನ್ನು ಓದಿ ತಿಳಿದುಕೊಂಡು ನಂತರ ಅದಕ್ಕೆ ನನ್ನ ಸಹಿ ಹಾಕಿರುತ್ತೇನೆ.

ನಾನು ದಾವೆ ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದ್ದು ಅವುಗಳನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

ಸಾಕ್ಷಿಯು ಈ ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ. ನಿ.ಡಿ. 1 ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

1) ನಿ.ಡಿ..2 - 1 ನೇ ಪ್ರತಿವಾದಿ ಬರೆದುಕೊಟ್ಟ ಮೂಲ ಜಿ.ಪಿ.ಎ. ದಿನಾಂಕಃ ೪01-03-2023

2) ನಿ.ಡಿ.3 - M.E No. B-22 ಬಾಡ 1 ಗ್ರಾಮ

3) ನಿ.ಡಿ.4 - ವಾರಿಸುದಾರರ ರಜಿಸ್ಟರ್ extract No. 1612

4) ನಿ.ಡಿ.5 - M.E. No. A-7518 ಬಾಡ 1 ಗ್ರಾಮ

ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ದಾವೆಯನ್ನು ವಜಾ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ